**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**

**ದಿಃ 05.03.2026**

**ಪಾಟೀ ಸವಾಲುಃ 6 ನೆ ಪ್ರತಿವಾದಿ ಪರ ಶ್ರೀ ಹೆಚ್ ಸಿ ಎಂ ಕೆ ವಕೀಲರಿಂದ**

1. ನಾನು ಗುಡ್ಡೆಹೊಸೂರಿನಲ್ಲಿ ವಾಸವಿರುತ್ತೇನೆ. ನನ್ನ ತಂದೆ ತಾಯಿ ಕುಶಾಲನಗರದಲ್ಲಿ ವಾಸವಿರುತ್ತಾರೆ. ಕುಶಾಲನಗರದಲ್ಲಿ ನನ್ನ ತಂದೆ ತಾಯಿ ಸ್ವಂತ ಮನೇಯಲ್ಲಿ ವಾಸವಿರುತ್ತಾರೆ. ಸದರಿ ಮನೆಯನ್ನು ಈ ದಾವೆಯಲ್ಲಿ ತೋರಿಸಿರುವುದಿಲ್ಲ. ನನ್ನ ತಂದೆ ತಾಯಿ ವಾಸವಿರುವ ಮನೆ ನನ್ನ ತಂದೆಗೆ ಅವರ ತಂದೆಯಿಂದ ಬಂದಿರುತ್ತದೆ. ಸದರಿ ಮನೆ ಮಾರ್ಕೇಟ್ ರಸ್ತೆ , ಆಂಜನೇಯ ದೇವಸ್ಥಾನದ ಬಳಿ ಇರುತ್ತದೆ. ಸದರಿ ಮನೆಯನ್ನು ಈ ದಾವೆಯಲ್ಲಿ ತೋರಿಸಲು ಯಾವುದೆ ತೊಂದರೆ ಇರಲಿಲ್ಲ. ಉದ್ದೇಶಪೂರಕವಾಗಿ ಮನೆಯನ್ನು ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಈ ಪ್ರಸ್ತುತ ದಾವೆಯಲ್ಲಿ ತೋರಿಸಿರುವುದು ಅಜ್ಜಿಯ ಆಸ್ತಿಯಾಗಿರುತ್ತದೆ , ಸದರಿ ಮನೆ ತಾತನ ಆಸ್ತಿಯಾಗಿರುತ್ತದೆ ಆದ್ದರಿಂದ ಈ ದಾವೆಯಲ್ಲಿ ತೋರಿಸಿರುವುದಿಲ್ಲ ಎಂದು ನುಡಿದರು. ನಾನು ಮದುವೆಯಾಗಿ 28 ವರುಷಗಳಾಗಿರುತ್ತದೆ. ನಾನು ಮದುವೆಯಾಗುವ ಪೂರ್ವದಲ್ಲಿ , ಶ್ರೀರಂಗಾಲ ಅಂಚೆ,ನಲ್ಲೂರು ಗ್ರಾಮದಲ್ಲಿ ವಾಸವಿದ್ದೆ . ಸದರಿ ಮನೆ ಈಗಲೂ ಹಾಗೆ ಇರುತ್ತದೆ. ಆ ಮನೆಯನ್ನು ನಾನು ಈ ದಾವೆಯಲ್ಲಿ ತೋರಿಸಿರುವುದಿಲ್ಲ. ಈ ದಾವೆಯ ದಾವಾಸ್ವತ್ತಿನ ಮೂಲ ಸರ್ವೆ ನಂ 14 ಆಗಿರುತ್ತದೆ.

2. ಸದರಿ ದಾವಾಸ್ವ ತ್ತಿನ ಆಸ್ತಿಯು ನನ್ನ ತಂದೆಗೆ ಅವರ ತಾಯಿಯಿಂದ ಬಂದಿರುತ್ತದೆ. ಸದರಿ ದಾವರ ಆಸ್ತಿಯು ನನ್ನ ತಂದೆಗೆ ಅವರ ತಾಯಿಯಿಂದ ಬಂದಿರುತ್ತದೆ ಎಂದು

ತೋರಿಸಲು ನಾನು ಯಾವುದೆ ದಾಖಲೆಗಳನ್ನು ನೀಡಿರುವುದಿಲ್ಲ. ನನ್ನ ತಂದೆಗೆ ಅವರ ತಾಯಿಯಿಂದ ದಾವಾಸ್ವತ್ತು ಸರ್ವೆ ನಂ 14 ರಲ್ಲಿ ಒಟ್ಟು 4.30 ಎಕರೆ ಜಾಗ ಬಂದಿರುತ್ತದೆ. ಪ್ರತಿವಾದಿ 3 ರಿಂದ 5 ರವರ ಮದುವೆಯಾಗಿರುತ್ತದೆ ಎಂದರೆ ಸರಿ . ಪ್ರತಿವಾದಿ 3 ರಿಂದ 5 ರವರು ಮದುವೆ ಕಾಲದಲ್ಲಿ ನಾನು ನಲ್ಲೂರು ಗ್ರಾಮದಲ್ಲಿ ಎಲ್ಲಾರು ಒಟ್ಟಾಗಿ ವಾಸವಿದ್ದೆವು ಎಂದರೆ ಸರಿ . ಆಗ ನನ್ನ ಮತ್ತು ಪ್ರತಿವಾದಿ 3 ರಿಂದ 5 ರವರ ಮದುವೆ ಖರ್ಚುಗಳನ್ನು ನನ್ನ ತಂದೆಯೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ . ನಮ್ಮ ಮನೆಯ ಖರ್ಚು ಎಲ್ಲಾವನ್ನೂ ನನ್ನ ತಂದೆಯೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ .

3. ನನ್ನ ತಂದೆಗೆ ಅವರ ತಾಯಿಯಿಂದ ಒಟ್ಟು 5 ಎಕರೆ 75 ಸೆಂಟ್ ಜಾಗ ಬಂದಿರುತ್ತದೆ ಎಂದರೆ ಸಾಕ್ಷಿಯು ಒಂದು ಕಾಲು ಎಕರೆ ನನ್ನ ಅತ್ತೆಗೆ ಹೋಗಿರುತ್ತದೆ ಎಂದು ನುಡಿದರು. ನನ್ನ ತಂದೆಗೆ 3 ಜನ ಸಹೋದರಿಯರು . ಸದರಿಯವರನ್ನು ನಾನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ . ನನ್ನ ತಂದೆ ದಿಃ 08.12.1989 ರಲ್ಲಿ ಒಂದು ಎಕರೆ 25 ಸೆಂಟ್ ಜಾಗವನ್ನು ದಾವಾಸ್ವತ್ತಿನ ಸರ್ವೆ ನಂ 14 ರಲ್ಲಿ ಲಕ್ಕಪ್ಪ ರವರಿಗೆ ರೂ 22,000/- ಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ . ಸದರಿ ಸ್ವತ್ತನ್ನು ನಾನು ಈ ಪ್ರಸ್ತುತ ದಾವೆಯಲ್ಲಿ ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ಲಕ್ಕಪ್ಪರವರು ನನ್ನ ಅತ್ತೆಯ ಗಂಡನಾಗಿದ್ದು ಅವರಿಗೆ ಅದನ್ನು ಕೊಟ್ಟಿರುತ್ತಾರೆ ಆದರೆ ಅದು ನೊಂದಣಿಯಾಗಬೇಕು ಎಂದು ರೂ 22,000/- ಎಂದು ತೋರಿಸಿರುತ್ತೇವೆ ಎಂದು ನುಡಿದರು.

4. ನಾವು ಶುದ್ಧ ಕ್ರಯ ಪತ್ರದ ಮೂಲಕ ರೂ 22,000/- ಕ್ಕೆ ಸ್ವತ್ತನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ರಂಗರಾಜು ಎನ್ನುವವರಿಗೆ ಸರ್ವೆ ನಂ 14 ರಲ್ಲಿ ಸ್ವತ್ತುನ್ನು ಮಾರಾಟ ಮಾಡುತ್ತೇನೆ ಎಂದು ಬರೆದುಕೊಟ್ಟಿದ್ದು ನಾವು ಬರೆದುಕೊಡದೆ ಮೋಸ ಮಾಡಿದ್ದೇವೆ ಎಂದು ನಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣ ಮತ್ತು ಸಿವಿಲ್ ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿಯು ರಂಗರಾಜು ರವರೇ ನನಗೆ ಮೊಸ ಮಾಡಿರುತ್ತಾರೆ ಎಂದು ನುಡಿದರು. ಸದರಿ ಅಸಲು ದಾವೆ ಡಿಕ್ರಿಯಾಗಿ ಅಮಲ್ಜಾರಿ ಮಡಿಕೇರಿ ನ್ಯಾಯಾಲಯದಲ್ಲಿ ನಡೆಯುತ್ತಿರುತ್ತದೆ ಎಂದರೆ ಸರಿ . ಅದೆ ರೀತಿ ರಂಗರಾಜುರವರು ವಿರುಪಾಕ್ಷರವರಿಗೆ ಮಾರಾಟ ಮಾಡಿದ ಜಾಗವನ್ನು ನಮಗೆ ಒಪ್ಪಂದ ಪತ್ರ ಮಾಡಿಕೊಟ್ಟಿದ್ದೀರಾ ಎಂದು ಕ್ರಿಮಿನಲ್ ಪ್ರಕರಣ ಹೂಡಿರುತ್ತಾರೆ ಎಂದರೆ ಸರಿಯಲ್ಲ.

5. 2002 ರಲ್ಲಿ ರಂಗರಾಜು ರವರು ನಮ್ಮ ವಿರುದ್ದ ಕ್ರಿಮಿನಲ್ ಪ್ರಕರಣ ಮತ್ತು ಸಿವಿಲ್ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ . ಸದರಿ ರಂಗರಾಜುರವರು ದಾಖಲಿಸಿರುವ ದಾವೆಯಲ್ಲಿ ನಾನು ಪಕ್ಷಗಾರರಾಗಿದ್ದೆ ಎಂದರೆ ಸರಿ . 2002 ರಿಂದ ನನಗೆ ನಮ್ಮ ತಂದೆಯವರು ಪ್ರತಿವಾದಿ 6 ರವರಿಗೆ ಕ್ರಯ ಪತ್ರ ಮಾಡಿಕೊಟ್ಟಿರುವ ವಿಚಾರ ನನಗೆ ತಿಳಿದಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ವಿರುಪಾಕ್ಷರವರು ರೂ 1,50,000/- ಹಣ ಕೊಟ್ಟಿದ್ದು ನಾವು ಪಂಚಾಯಿತಿ ಮಾಡಿ ವಿರುಪಾಕ್ಷರವರಿಗೆ ರೂ 2 ಲಕ್ಷ ಹಣವನ್ನು ಹಿಂತಿರುಗಿಸಿರುತ್ತೇವೆ . ಈ ಹಣವನ್ನು ಯಾವ ವರುಷದಲ್ಲಿ ಕೊಟ್ಟಿರುತ್ತೇವೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಗೆ 2002 ನೆ ಇಸವಿ ಎಪ್ರಿಲ್ 3 ರಂದು ವಿರುಪಾಕ್ಷರವರು ರೂ

1,50,000/- ಹಣವನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹಣವನ್ನು ಕೊಟ್ಟಿರುತ್ತಾರೆ ಯಾವ ವರುಷ ಎಂದು ಗೊತ್ತಿಲ್ಲ ಎಂದು ನುಡಿದರು.

6. ಸದರಿ ಹಣವನ್ನು ಪಡೆದುಕೊಂಡು ನನ್ನ ತಂದೆ ಮತ್ತು ತಾಯಿ ವಿರುಪಾಕ್ಷರವರಿಗೆ ದಾವಾ ಶೆಡ್ಯೂಲ್ 2 ರ ಸ್ವತ್ತನ್ನು ಶುದ್ಧ ಕ್ರಯ ಪತ್ರವನ್ನು ದಿಃ 03.04.2002 ರಂದು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಿರುಪಾಕ್ಷರವರೇ ಮೋಸ ಮಾಡಿಕೊಂಡು ಕ್ರಯ ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದು ನುಡಿದರು. ನನ್ನ ತಂದೆ ತಾಯಿ ಶುದ್ಧ ಕ್ರಯ ಪತ್ರವನ್ನು ವಿರುಪಾಕ್ಷರವರಿಗೆ ಬರೆದುಕೊಟ್ಟ ವಿಚಾರ ಈತ್ತಿಚಿಗೆ ಅಂದರೆ ಮೂರು ವರುಷದಲ್ಲಿ ತಿಳಿದು ಬಂದಿರುತ್ತದೆ . ವಿರುಪಾಕ್ಷ ರವರು ಮೋಸ ಮಾಡಿದರು ಎಂದು ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲು ಮಾಡಿರುತ್ತಾರೆ. ಸದರಿ ಪ್ರಕಣದ ಸಂಖ್ಯೆ ನನಗೆ ಗೊತ್ತಿಲ್ಲ. ಆ ರೀತಿ ಯಾವುದೆ ಪ್ರಕರಣವನ್ನು ದಾಖಲು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಮತ್ತು ಸಹೋದರ ಸಹೋದರಿಯವರು ಒಟ್ಟಿಗೆ ಚೆನ್ನಾಗಿ ಇರುತ್ತೇವೆ .

7. ಪ್ರತಿವಾದಿ 4 ರವರು ಮದುವೆಯಾಗಿ 19 ವರುಷ ಆಗಿರುತ್ತದೆ. ಪ್ರತಿವಾದಿ 5 ರವರು ಮದುವೆಯಾಗಿ 14 ವರುಷ ಆಗಿರುತ್ತದೆ. ನನ್ನ ತಂದೆ ವಿರುಪಾಕ್ಷರವರಿಗೆ ಕ್ರಯ ಮಾಡಿಕೊಟ್ಟ ಬಂದ ಹಣದಿಂದ ಪ್ರತಿವಾದಿ 4 ಮತ್ತು 5 ರವರ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತು ನನ್ನ ತಂದೆಗೆ ಅವರತಾಯಿ ಕಡೆಯಿಂದ ಬಂದಿರುವ ಕಾರಣ ನಮಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 6 ರವರು ದಾವಾ

ಸ್ವತ್ತಿನ ಸ್ವಾಧೀನದಲ್ಲಿದ್ದು ಅವರಿಗೆ ತೊಂರದೆ ಕೊಡಬೇಕು ಎಂದು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 05.06.2016 ರಂದು ಪ್ರತಿವಾದಿ 1 ಮತ್ತು 3 ರವರು 6 ನೆ ಪ್ರತಿವಾದಿಗೆ ತೊಂದರೆ ಕೊಟ್ಟರು ಎಂದು 6 ನೆ ಪ್ರತಿವಾದಿಯವರು ಇದೆ ನ್ಯಾಯಾಲಯದಲ್ಲಿ ಒ ಎಸ್ ನಂ 22/2016 ರಂತೆ ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಸದರಿ ದಾವೆಯು 6 ನೆ ಪ್ರತಿವಾದಿಯ ಪರವಾಗಿ ಡಿಕ್ರಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

8. ನಾನು ಪ್ರತಿವಾದಿ 6 ರವರ ವಿರುದ್ದ ಈ ಪ್ರಸ್ತುತ ದಾವೆಯನ್ನು ಮಾತ್ರ ನಡೆಸುತ್ತಿದ್ದೇನೆ . ಈ ಪ್ರಸ್ತುತ ದಾಮೆಯ ಪ್ರತಿವರಾದಿ 1 ಮತ್ತು 3 ರವರು , ಪ್ರತಿವಾದಿ 6 ರವರ ಪರವಾಗಿ ಡಿಕ್ರಿಯಾಗಿದ್ದ ದಾವೆಯ ವಿರುದ್ದ ಮೇಲ್ಮನವಿಯನ್ನು ಸಲ್ಲಿಸಿ ಮತ್ತು ಮಾನ್ಯ ಉಚ್ಚ ನ್ಯಾಯಾಲಯದಲ್ಲೂ ಮೇಲ್ಮನವಿ ಸಲ್ಲಿಸಿ ಅಲ್ಲಿಯೂ ಅವರ ವಿರುದ್ದ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 6 ರವರು ಸಲ್ಲಿಸಿರುವ ದಾವೆಯಲ್ಲಿ ನನ್ನ ತಂದೆ ಮತ್ತು ಅವರ ವಾರಸುದಾರರಾದ ನಾವು ದಾವಾಸ್ವತ್ತಿನ ಸ್ವಾಧೀನಕ್ಕೆ ತೊಂದರೆ ಕೊಡಬಾರದು ಎಂದು ಡಿಕ್ರಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಡಿಕ್ರಿ ಆದೇಶದ ಮೇರೆಗೆ ನಾವುಗಳು ತೊಂದರೆ ಕೊಡುತ್ತಿದ್ದೆವು ಎಂದು ಅಮಲ್ಜಾರಿ ಹೂಡಿದ್ದು ಅಲ್ಲಿ ನಾನು ತಕರಾರುದಾರರಾಗಿ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ . ಪ್ರತಿವಾದಿ 6 ರವರು ಅವರ ಜಾಗದಲ್ಲಿ ವ್ಯವಸಾಯ ಮಾಡುತ್ತಿದ್ದು ನಾವು ಅವರಿಂದ ತೊಂದರೆ ಕೊಡುತ್ತಿದ್ದೇವು ಎಂದರೆ ಸರಿಯಲ್ಲ.

9. ಪ್ರತಿವಾದಿ 6 ರವರಿಗೆ ಎರಡು ಎಕರೆ ಮಾರಾಟ ಮಾಡಿದ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ದಾವಾ ಸ್ವತ್ತಿನಿಂದ 6 ನೆ ಪ್ರತಿವಾದಿಗೆ ರೂ 8 ಲಕ್ಷ ಆದಾಯ ಬರುತ್ತಿದೆ ಅದರಲ್ಲಿ ನನಗೆ ಮೀನ್ ಫ್ರಾಫಿಟ್ ಬರಬೇಕು ಎಂದು ಕೇಳಿಕೊಂಡಿದ್ದು ಅದರಂತೆ 6 ನೆ ಪ್ರತಿವಾದಿಗೆ ಅಷ್ಟು ಆದಾಯ ಇರುವುದಿಲ್ಲ ಮತ್ತು ಅದನ್ನು ಅವರು ನಮಗೆ ಸಂದಾಯ ಮಾಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**6 ನೆ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು .**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ